<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿಸಿ ನಂ. 101/2018**

| | | | |
|---|---|---|---|
| ಹೆಸರು | : | ಡಾ. ಜಯಮ್ಮ | ಚಾ.ಸಾ.21 |
| ಗಂಡನ ಹೆಸರು | : | ಶರಣಬಸಪ್ಪ | ಪ್ರಾ.ಸಾ.14 |
| ವಯಸ್ಸು | : | 56 ವರ್ಷ | ದಿನಾಂಕಃ 04-12-2023 |
| ಉದ್ಯೋಗ | : | ಹಿರಿಯ ವೈದ್ಯಧಿಕಾರಿ | |
| ವಾಸಸ್ಥಳ | : | ಗುಲಬರ್ಗಾ | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

2015 ರಿಂದ 2018 ರವರೆಗೆ ವೈದ್ಯಧಿಕಾರಿಯಾಗಿ ಸಾರ್ವಜನಿಕ ಆಸ್ಪತ್ರೆ ಸೇಡಂನಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 11-10-2017 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಪ್ರಾಸಾ-3 ರವರು ಪ್ರಾಸಾ-6 ರವರ ಜೊತೆ ನಮ್ಮ ಆಸ್ಪತ್ರೆಗೆ ಬಂದಿದ್ದು ಅವರಿ ತಪಾಸಣೆ ಮಾಡಿ ನೋಡಿದಾಗ ಅವರ ಕುತ್ತಿಗೆಯ ಭಾಗಕ್ಕೆ ಮತ್ತು ಹೊಟ್ಟೆಯ ಕೇಳ ಭಾಗಕ್ಕೆ ಗಾಯ ಕಂಡುಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವ ರೂಪದ ಗಾಯಗಳಾಗಿವೆ. ಈಗ ನೋಡುತ್ತಿರುವ ಗಾಯದ ಪ್ರಮಾಣ ಪತ್ರ ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-10 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಕುತ್ತಿಗೆಗೆ ನೇಣು ಹಾಕಿದಾಗ 1 ನೇ ಗಾಯ ಆಗಬಹುದು ಮತ್ತು ಕೈಯಿಂದ ಹೊಡೆದಾಗ 2 ನೇ ಗಾಯ ಆಗಬಹುದು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ-</u>

ಸಾಮಾನ್ಯವಾಗಿ ಗಾಯಾಳುಗಳು ಬಂದರೆ ಇನ್ ವರ್ಡ ಮತ್ತು ಔಟ್ ವರ್ಡ ಮಾಡುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಒಪಿಡಿ ಚೀಟಿ ಪಡೆದುಕೊಂಡಾಗ ಗಾಯಾಳುಗಳಿಗೆ ತಪಾಸಣೆ ಮಾಡುತ್ತೇವೆ ಎಂದರೆ ಸರಿ. ಒಪಿಡಿಗೆ ಸಂಖ್ಯೆ ಕೊಡುತ್ತಾರೆ ಎಂದರೆ ಸರಿ. ನಿಪಿ-10 ರ ಗಾಯದ ಪ್ರಮಾಣ ಪತ್ರದಲ್ಲಿ ಒಪಿಡಿ ಸಂಖ್ಯೆ ಉಲ್ಲೇಖವಿರುವುದಿಲ್ಲ. ಸಾಕ್ಷಿ ಮುಂದುವರೆದು ನಿಪಿ-10 ರಲ್ಲಿರುವ ಸಂಗತಿಗಳನ್ನು ಮಾತ್ರ ತುಂಬುತ್ತೇವೆ ಆದರೆ ಸಂಖ್ಯೆ ಬರೆಯುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ರಲ್ಲಿ ಗಾಯಾಳುಗಳ ಗುರುತಿನ ಬಗ್ಗೆ ಉಲ್ಲೇಖ ಮಾಡಿದ್ದೇನೆ. ನಿಪಿ-10

ದಾಖಲೆಯಲ್ಲಿ ಗಾಯದ ವಯಸ್ಸು ಉಲ್ಲೇಖವಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ರಕ್ತಗಾಯ ಆಗದೆ ಇರುವ ಕಾರಣ ಗಾಯದ ವಯಸ್ಸು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಗಾಯವಾದಾಗ ಬಣ್ಣ ಬದಲಾಗುತ್ತದೆ ಎಂದರೆ ಸಾಕ್ಷಿ ಆಗಲೇ ಬೇಕಾಗಿರುವುದಿಲ್ಲ ಒಳ ರಕ್ತಗಾಯ ಆದಾಗ ಮಾತ್ರ ಬಣ್ಣ ಬದಲಾಗತ್ತದೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ನೇಣು ಹಾಕಿಕೊಂಡಾಗ ಕುತ್ತಿಗೆಯ ಭಾಗದ ಬಣ್ಣ ಬದಲಾಗುತ್ತದೆ ಎಂದರೆ ಸರಿ. ಈ ರೀತಿ ನಾನು ಬಣ್ಣದ ಬಗ್ಗೆ ನಿಪಿ-10 ರಲ್ಲಿ ಉಲ್ಲೇಖ ಮಾಡಿರುವುದಿಲ್ಲ. ನಿಪಿ-10 ರಲ್ಲಿ ಗಾಯಾಳು ತಾನಾಗಿಯೇ ನೇಣು ಹಾಕಿಕೊಂಡಿರುವ ಬಗ್ಗೆ ಉಲ್ಲೇಖವಿದೆ ಎಂದರೆ ಸರಿ. ಸಾಮಾನ್ಯವಾಗಿ ಒಂದು ಗಟ್ಟಿ ನೆಲದ ಮೇಲೆ ಬಿದ್ದಾಗ 1 ಮತ್ತು 2 ನೇ ಗಾಯ ಆಗಬಹುದು ಎಂದರೆ ಸರಿ. ಗಾಯಾಳುವಿಗೆ ಸಹಾಯ ಮಾಡಲೆಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿ ಈ ದಿನ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**